ಸಮಾಜದ ಹಿತಕ್ಕೆ ಪೂರಕವಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳಲಿಕ್ಕೆ ಎಲ್ಲ ದೇಶ–ಭಾಷೆಯೂ ತನ್ನ ಸಮುದಾಯಕ್ಕೆ 'ವಿವೇಕ'ವೊಂದನ್ನು ಕಟ್ಟಿಕೊಡುತ್ತದೆ. ಅಂಥ 'ವಿವೇಕ ಪರಂಪರೆ' ಕನ್ನಡದಲ್ಲೂ ಇದೆ. ಆ ವಿವೇಕ ಪರಂಪರೆಯ ಭಾಗವಾಗಿ ಕೆಳಗಿನ ಸಾಲುಗಳನ್ನು ಗುರ್ತಿಸಬಹುದು:

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು
ಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ|
ರ್ಗರೆವಟ್ಟಾಗಿರು, ಶಿಷ್ಟರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆವೆಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ|

ವಿಜಯನಗರ ಕಾಲದ್ದೆಂದು ಗುರ್ತಿಸಲಾದ ಶಾಸನವೊಂದರ ಈ ಸಾಲುಗಳು, ಅರಸು ಪ್ರೌಢ ಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನಿಗೆ ಆತನ ತಾಯಿ ಹೇಳಿದ ಮಾತುಗಳು. ಮಗ ಕೂಸಾಗಿದ್ದಾಗ ತಾಯಿ ಹಾಲುಣಿಸುತ್ತ ಕರುಳಕುಡಿಯ ಕಿವಿಯಲ್ಲಿ ಉಸುರಿದ ಈ ಮಾತುಗಳು ಬದುಕಿನ ಸಾರ್ಥಕತೆ ಯಾವುದರಲ್ಲಿದೆ ಎನ್ನುವುದನ್ನು ಸೂಚಿಸುವಂತಿವೆ.

ಕೆರೆಯನ್ನು ಕಟ್ಟಿಸು. ಬಾವಿಯನ್ನು ತೋಡಿಸು. ದೇಗುಲಗಳನ್ನು ನಿರ್ಮಿಸು. ಸೆರೆಯಲ್ಲಿರುವ ಅನಾಥರನ್ನು (ಅಸಹಾಯಕರನ್ನು) ಬಂಧಮುಕ್ತಗೊಳಿಸು. ಸ್ನೇಹಿತರಿಗೆ ಊರುಗೋಲಾಗು. ನಂಬಿದವರಿಗೆ ಆಸರೆಯಾಗು... ಆಗು ಆಗು ಆಗು ಎನ್ನುವ ಇದೇ ಅಲ್ಲವೇ ಮನುಷ್ಯನಾಗುವ ಪ್ರಕ್ರಿಯೆ. ಇದು ಮಂತ್ರಿಯೊಬ್ಬನ ತಾಯಿಯ ಹಂಬಲ ಮಾತ್ರವಲ್ಲ; ಎಲ್ಲ ತಾಯಂದಿರೂ ತಮ್ಮ ಮಕ್ಕಳನ್ನು ಹೀಗೆ ಆಗಬೇಕೆಂದೇ ಆಶಿಸುವುದು. ಎಲ್ಲರೂ ಮಂತ್ರಿಗಳಾಗುವುದು ಅಸಾಧ್ಯ. ಹಾಗಾಗಿ ಕೆರೆಗಳನ್ನು ಕಟ್ಟಿಸುವ ಅವಕಾಶ ಎಲ್ಲರಿಗೂ ದೊರೆಯುವುದಿಲ್ಲ. ಆದರೆ, ಗಿಡಮರಗಳನ್ನು ನೆಡುವುದಕ್ಕೆ, ದೀನದುರ್ಬಲರಿಗೆ ಕಲ್ಲುಸಕ್ಕರೆಯಾಗಲಿಕ್ಕೆ ಮಂತ್ರಿಪದವಿಯೇನೂ ಬೇಕಿಲ್ಲವಲ್ಲ. ಅದಕ್ಕೆ ಬೇಕಿರುವುದು ಹೃದಯಶ್ರೀಮಂತಿಕೆ.

## 'ಉಚ್ಚಿಷ್ಟ ಚೆಲ್ಲಿ ಹೋದರೆ ಹೇಗಾದೀತು?'

ಪರಿಸರ ಸಂರಕ್ಷಣೆ ಎನ್ನುವುದು ನಮ್ಮ ಜೀವನ ವಿಧಾನವೇ ಆಗಬೇಕು ಎನ್ನುವುದಕ್ಕೆ ನಿದರ್ಶನವಾಗಿ ಶಿವರಾಮ ಕಾರಂತರ ಮಾತೊಂದನ್ನು ಗಮನಿಸಬಹುದು. ಅವರು ತಮ್ಮ ಆತ್ಮಕಥೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯ ಆರಂಭದಲ್ಲಿ ಹೇಳುವ ಮಾತುಗಳು ಹೀಗಿವೆ:

''ನಾವು ಭೂಮಿಗೆ ಬಂದ ದಿನ ನಮ್ಮ ಸುತ್ತಣ ಬದುಕು ಈಗ ಇರುವುದಕ್ಕಿಂತ ಒಂದಿಷ್ಟು ಹೆಚ್ಚು ಚಂದವಾಗುವಂತೆ ಮಾಡಿ ಇಲ್ಲಿಂದ ಹೊರಡಬೇಕು ಎಂಬ ಭಾವನೆ ನನ್ನ ಬದುಕನ್ನು ನಡೆಸಿದ ಸೂತ್ರ. ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಂತೆ, ತಾವು ನಲಿದು, ಉಂಡು ಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಚಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ನಾವೇ ಅಲ್ಲಿಗೆ ತಿರುಗಿ ಬರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನೆಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೆ ಹೋದರೆ ಹೇಗೆ? ಆ ಪ್ರಶ್ನೆಗೆ ಉತ್ತರವಾಗಿ ಅವರವರ ಕರ್ಮ ಅವರವರಿಗೆ ಎಂದರೆ ಸಾಕೇನು? ಜೀವನ ಪ್ರವಾಹದ ಕರ್ಮಕಾಂಡ ವ್ಯಕ್ತಿಗೆ ಬದ್ಧವಾದ, ವ್ಯಕ್ತಿಯಿಂದ ಪ್ರಭಾವಿತವಾಗುವ ಸಾಮೂಹಿಕ ಕರ್ಮಕಾಂಡ. ಆ ಸಮೂಹದ ಒಳಿತು ಕೆಡಕುಗಳು ಪಾಲು ಮತ್ತು ಹೊಣೆ ಪ್ರತಿ ವ್ಯಕ್ತಿಯ ಪಾಲಿಗೆ ಇದ್ದೇಇದೆ.''

ನಮ್ಮ ಉಚ್ಚಿಷ್ಟವನ್ನು ಚೆಲ್ಲಬಾರದೆನ್ನುವ ಅರಿವಿನ ಜೊತೆಗೆ, ನಮ್ಮ ಮಕ್ಕಳಿಗೆ ನಾವೇ ಕೆಟ್ಟ ಮಾದರಿಯಾಗಬಾರದೆನ್ನುವ ತಿಳಿವು ಬಹು ಮುಖ್ಯವಾದುದು. ಕಾರಂತರ ಬದುಕನ್ನು ಮುನ್ನಡೆಸಿದ ಈ ನಂಬಿಕೆ ನಮ್ಮೆಲ್ಲರ ಬದುಕಿಗೂ ಮಾರ್ಗದರ್ಶಕ ಆಗಬೇಕು.



